† ಶ್ರೀ ವೈ. ರಾಮಕೃಷ್ಣ:—ಅದರ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೊಟ್ಟರೆ ಅದಕ್ಕೆ ಉತ್ತರ ಕೊಡುತ್ತೇನೆ.

ಶ್ರೀ ಕೆ.ಪ್ರಭಾಕರ್ :—ಈ ಆಸ್ಪತ್ರೆಯನ್ನು ೧೬ನೇ ತಾರೀಖಿನಿಂದ ಹೊಸ ಕಟ್ಟಡಕ್ಕೆ ಬದಲಾಯಿಸಿದ್ದೀರಿ. ಆಸ್ಪತ್ರೆಯಲ್ಲಿ ಇರಬೇಕಾದಂಥ ಅನುಕೂಲಗಳು ಇಲ್ಲದೆ ಡಿಸ್‌ಪೆನ್ಸರಿ ವರ್ಕ್‌ಮಾಡುವುದಕ್ಕೆ ಏನೇನು ಅನಕೂಲಗಳನ್ನು ಮಾಡಬೇಕೋ ಅವು ಇಲ್ಲದೇ ತೊಂದರೆಯಾಗಿದೆ. ಅದನ್ನು ಸರ್ಕಾರದವರು ಸರಿಪಡಿಸಬೇಕೆಂದು ಹೇಳಿದರೆ ಒಪ್ಪುತ್ತೀರೋ?

ಶ್ರೀ ವೈ. ರಾಮಕೃಷ್ಣ:—ಅಲ್ಲಿ ಅಗತ್ಯವಾಗಿ ಏನೇನು ಇರಬೇಕೊ ಆ ಮೆಡಿಕಲ್ ಫೆಸಿಲಿಟೀಸ್ ಅಂದರೆ, ಮಿಡ್‌ವೈಫ್ಸ್, ಕ್ಲರ್ಕ್ಸ್, ಮತ್ತು ಮೆಡಿಸನ್ಸ್ ಎಲ್ಲವು ಇವೆ. ಅದು ಚೆನ್ನಾಗಿ ನಡೆಯುತ್ತಿದೆಯೆಂದು ನನಗೆ ವರ್ತಮಾನ ಬಂದಿದೆ.

ಶ್ರೀ ಕೆ.ಪ್ರಭಾಕರ್:—ಈ ಕಟ್ಟಡ ಆಸ್ಪತ್ರೆ ನಡೆಸುವುದಕ್ಕೆ ಸರಿಯಾಗಿಲ್ಲ. ಇದರ ಬಗ್ಗೆ ತುಂಬಾ ಕೊರತೆಯಾಗಿರುವುದರಿಂದ ಸೂಕ್ತ ರೀತಿಯಲ್ಲಿ ಮುಂದೆ ಈ ಆಸ್ಪತ್ರೆಯನ್ನು ನಡೆಸುವುದಕ್ಕೆ ಅನುಕೂಲ ಮಾಡಿಕೊಡುತ್ತೀರಾ?

ಶ್ರೀ ವೈ.ರಾಮಕೃಷ್ಣ: —ತಾಲೂಕು ಬೊರ್ಡಿನವರು ಯಾವ ಕಟ್ಟಡವನ್ನು ಕಟ್ಟುತ್ತಾರೋ ಅಲ್ಲಿ ಅದನ್ನು ನಡೆಸುವುದಕ್ಕೆ ಪರ್ಮಿಷನ್ ಕೊಟ್ಟಿದ್ದೇವೆ, ಅವರಿಗೆ ೧೬ ಸಾವಿರ ರೂಪಾಯಿಗಳು ಹೊಸ ಕಟ್ಟಡಕ್ಕೆ ಸಾಕು ಎಂಬ ಅಭಿಪ್ರಾಯ ಬಂದಿದೆ.

ಶ್ರೀ ಕೆ. ಪ್ರಭಾಕರ್.—ಅಲ್ಲಿ ಇನೂ ಏನೇನು ಅನಾನುಕೂಲಗಳಿವೆಯೋ ಅವನ್ನು ಸರಿಮಾಡಿಕೊಡುತ್ತೀರಾ?

ಶ್ರೀ ವೈ. ರಾಮಕೃಷ್ಣ:—ಅಂತಹ ಅನಾನುಕೂಲಗಳು ಇದ್ದರೆ ಅವನ್ನು ಸರಿಪಡಿಸುತ್ತೇವೆ.

ಶ್ರೀ ವಿ. ಎನ್. ಪಾಟೀಲ್:—ಈಗತಾನೇ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ತಾಲ್ಲೂಕು ಬೋರ್ಡಿನವರು ಎಲ್ಲೆಲ್ಲಿ ಸರಿಯಾದ ಸ್ಥಳಗಳನ್ನು ಒದಗಿಸಿ ಕಟ್ಟಡಗಳನ್ನು ಒದಗಿಸಿಕೊಡುತ್ತಾರೋ ಅಲ್ಲಿ ಅವನ್ನು ಪ್ರಾರಂಭಮಾಡುವುದಕ್ಕೆ ಅಪ್ಪಣೆ ಕೊಡುತ್ತೇವೆಂದು ಹೇಳಿದರು. ಬೀದರ್ ಜಿಲ್ಲೆಯಲ್ಲಿ ಹುಮನಾಬಾದ್ ಮತ್ತು ಬೀದರ್ ಮುನಿಸಿಪಾಲಟಿಯವರಿಂದ ಸ್ಥಳ ತೆಗೆದುಕೊಳ್ಳುವುದಕ್ಕೆ ನಿಮಗೆ ಆಗುವುದಿಲ್ಲವೆಂದು ಹೇಳುತ್ತೀರಿ. ಆ ಪ್ರಿನ್ಸಿಪಲ್ಲನ್ನು ಇಲ್ಲಿಯೂ ಅಪ್ಲೈಮಾಡುತ್ತೀರಾ?

ಶ್ರೀ ವೈ. ರಾಮಕೃಷ್ಣ:—ಅದು ಈ ಪ್ರಶ್ನೆಯಲ್ಲಿ ಉದ್ಭವಿಸುವುದಿಲ್ಲ.

PRIMARY SCHOOL TEACHERS IN GADAG TALUK

341. Sri K. H. Patil (Gadag):—

Will the Minister for Education be pleased to state:—

(*a*) whether any primary school teachers in Gadag Taluk are continued to work for more than three years in the same place;

(*b*) if so, their names, the places at which such teachers are working together with the special reason for their non-transfer;